ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

1. ಬಂದಿಲ್ಲ.

2. ಬೇಲೂರ ಕೈಗಾರಿಕಾ ವಲಯ ಧಾರವಾಡ ತಾಲ್ಲೂಕಿನ ವ್ಯಾಪ್ತಿಯಲ್ಲಿದ್ದು ಧಾರವಾಡ ನಗರದಿಂದ ಬೇಲೂರ ಕೈಗಾರಿಕಾ ವಲಯಕ್ಕೆ ಸಮರ್ಪಕ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಹುಬ್ಬಳ್ಳಿಯಿಂದ ಪ್ರಯಾಣಿಕರ ಬೇಡಿಕೆ ಬಂದಲ್ಲಿ ಸಾರಿಗೆ ಓಡಿಸಲು ಕ್ರಮ ಕೈಗೊಳ್ಳಲಾಗುವುದು.

ಹುಬ್ಬಳ್ಳಿ ತಾಲ್ಲೂಕಿನಲ್ಲಿ ಭೂ ಸುಧಾರಣ ತಿದ್ದುಪಡಿ ಕಾನೂನಿನನ್ವಯ ಅರ್ಜಿ ಸಲ್ಲಿಸಿರುವವರು.

1538(2166) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) :— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭೂ ಸುಧಾರಣಾ ತಿದ್ದುಪಡಿ ಕಾನೂನಿನ ಅನ್ವಯ ಹುಬ್ಬಳ್ಳಿ ತಾಲ್ಲೂಕಿನಲ್ಲಿ ನಮೂನೆ ನಂ. 7ಎ ಸಲ್ಲಿಸಿದವರ ಸಂಖ್ಯೆ ಎಷ್ಟು?

ಆ) ಅವುಗಳ ವಿಚಾರಣೆ ಪ್ರಾರಂಭವಾಗದಿರಲು ಕಾರಣಗಳೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) 264

ಆ) ಈ ಅರ್ಜಿಗಳ ವಿಚಾರಣೆಯನ್ನು ತಹಸೀಲ್ದಾರ್, ಹುಬ್ಬಳ್ಳಿ ಇವರು ಈಗಾಗಲೇ ಕೈಗೊಂಡಿದ್ದಾರೆ. ಆದ್ದರಿಂದ ಈ ಅರ್ಜಿಗಳ ವಿಲೇವಾರಿಯಲ್ಲಿ ಯಾವ ವಿಳಂಬ ಆಗಿರುವುದಿಲ್ಲ.

ಹುಬ್ಬಳ್ಳಿಯಲ್ಲಿ ಶ್ರೀ ಜೀವೇಶ್ವರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಹಣ ದುರುಪಯೋಗ.

1539(2167) ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿಯಲ್ಲಿ ಶ್ರೀ ಜೀವೇಶ್ವರ ಗೃಹ ನಿರ್ಮಾಣ ಸಹಕಾರ ಸಂಘ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ಸಂಘವು ನಿವೇಶನ ವಿತರಣೆ ಮಾಡುವುದಕ್ಕಾಗಿ ಸಂಘದ ಸದಸ್ಯರಿಂದ ಸಂಗ್ರಹಿಸಿದ 40 ಲಕ್ಷ ರೂಪಾಯಿಗಳನ್ನು ಅವ್ಯವಹಾರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸರ್ಕಾರವು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :—

ಅ) ಹೌದು

ಆ) ಹೌದು

ಇ) ಸದರಿ ಸಂಘದಲ್ಲಿನ ಅವ್ಯವಹಾರಗಳ ಬಗ್ಗೆ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಧಾರವಾಡ ಉಪ ವಿಭಾಗ, ಧಾರವಾಡ, ಇವರು ದಿನಾಂಕ: 4-3-99ರಂದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರ ವಿಚಾರಣೆಗೆ ಆದೇಶಿಸಿದ್ದು, ವಿಚಾರಣೆ ಪ್ರಗತಿಯಲ್ಲಿದೆ. ವಿಚಾರಣಾ ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಕೊಳಚೆ ನಿರ್ಮೂಲನ ಮಂಡಳಿಯ ಕಾಮಗಾರಿ.

1541(2220) ಶ್ರೀ ಕುನ್ನೂರು ಮಂಜುನಾಥ ಚನ್ನಪ್ಪ (ಶಿಗ್ಗಾಂವಿ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿಗ್ಗಾಂವ ಮತ್ತು ಸವಣೂರ ತಾಲ್ಲೂಕುಗಳಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ತೆಗೆದುಕೊಂಡ ಕಾಮಗಾರಿಗಳು ಯಾವುವು;

ಆ) ಅವುಗಳ ಪ್ರಗತಿ ಯಾವ ಹಂತದಲ್ಲಿವೆ;

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಮಂಡಳಿಯ ಮತಿಯಿಂದ 1998-99ನೇ ಸಾಲಿನ ಅಂತ್ಯದವರೆಗೆ ಶಿಗ್ಗಾಂವ್‌ನಲ್ಲಿ 5 ಕೊಳಚೆ ಪ್ರದೇಶಗಳಲ್ಲಿ 13.50 ಲಕ್ಷ ರೂ.ಗಳಲ್ಲಿ ಹಾಗೂ ಸವಣೂರಿನಲ್ಲಿ 4 ಕೊಳಚೆ ಪ್ರದೇಶಗಳಲ್ಲಿ 8.38 ಲಕ್ಷ ರೂ.ಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.

1999-2000ನೇ ಸಾಲಿನ ಕ್ರಿಯಾ ಯೋಜನೆಯಡಿ ಶಿಗ್ಗಾಂವ್‌ನ ಕುಂಚಿ ಕೊರವರ ಓಣಿ ಮತ್ತು ಸಾಲಗಾರ ಓಣಿ ಕೊಳಚೆ ಪ್ರದೇಶಕ್ಕೆ ಅಂದಾಜು ತಲಾ ರೂ. 1.00 ಲಕ್ಷಗಳಂತೆ ಒಟ್ಟು 2.00 ಲಕ್ಷ ವೆಚ್ಚದಲ್ಲಿ ಚರಂಡಿ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಹಣ ನಿಗಧಿಪಡಿಸಲಾಗಿದೆ ಹಾಗೂ ಇದೇ ಸಾಲಿನಲ್ಲಿ ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿ ವಿದ್ಯಾಗಿರಿ ಕೊಳಚೆ ಪ್ರದೇಶಕ್ಕೆ 1.50 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಚರಂಡಿ ಮತ್ತು ಬೀದಿ ದೀಪ ಕಾಮಗಾರಿ ಕೈಗೊಳ್ಳಲು ಹಣ ನಿಗಧಿಪಡಿಸಲಾಗಿದೆ. ಮತ್ತು ಸವಣೂರಿನ ಲಾಲಸಾನ ಕಟ್ಟಿ ಪ್ರದೇಶದಲ್ಲಿ 1.00 ಲಕ್ಷದಿಂದ ಚರಂಡಿ ನಿರ್ಮಿಸಲು ಹಣ ನಿಗಧಿಪಡಿಸಲಾಗಿದೆ. ಹಾಗೂ ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿ ರೂ. 1.50 ಲಕ್ಷ ಅಂದಾಜಿನಲ್ಲಿ ಚರಂಡಿ, ಬೀದಿ ದೀಪ ಕಾರ್ಯಕ್ರಮಕ್ಕೆ ಹಣ ನಿಗಧಿಪಡಿಸಲಾಗಿದೆ.

ಹುಡ್ಕೋ ಯೋಜನೆಯಡಿ ಶಿಗ್ಗಾಂವ್‌ನಲ್ಲಿ 80 ಮನೆಗಳನ್ನು ಹಾಗೂ ಸವಣೂರಿನಲ್ಲಿ ಹುಡ್ಕೋ ಯೋಜನೆಯಡಿ 56 ಮನೆಗಳನ್ನು ಹಾಗೂ ವಿಶೇಷ ಘಟಕ ಯೋಜನೆಯಡಿ 50 ಮನೆಗಳ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ.